## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಹರೀಶ ಕುಮಾರ್, ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ

ವಿಷಯ: ಹವಾಮಾನ ಆಧಾರಿತ ಬೆಳೆ ವಿಮೆಗೆ ಕಂಪನಿಗಳ ಹಿಂದೇಟು ವಿಷಯ ಕುರಿತು ದಿನಾಂಕ: 26.06.2023ರ ಕನ್ನಡ ಪ್ರಭ ದಿನ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ. ಕೇಂದ್ರ ಸರ್ಕಾರದ ಹವಾಮಾನ ಆಧಾರಿತ ಬೆಳೆ ವಿಮೆ ಪಾವತಿಗೆ ಜೂನ್-30ರ ಅಂತಿಮ ಗಡುವು ವಿಧಿಸಲಾಗಿದ್ದು, ವಿಮಾ ಕಂಪನಿ ಹಾಗೂ ವಿಮೆ ವೆಚ್ಚದ ಬಗ್ಗೆ ಬೆಳೆಗಾರರಿಗೆ ರಾಜ್ಯ ಸರ್ಕಾರ ಈವರೆಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಇನ್ನೂ ಕೊನೆ ಕ್ಷಣದಲ್ಲಿ ವಿಮೆ ಮೊತ್ತ ತುಂಬಿಸುವಂತೆ ಹೇಳಿದರೆ ಅದರಿಂದ ಅರ್ಹ ಬೆಳೆಗಾರರು ವಿಮಾ ಯೋಜನೆಯಿಂದ ವಂಚಿತಗೊಳ್ಳಲಿದ್ದಾರೆ ಎಂಬುದು ತಿಳಿದುಬಂದಿರುತ್ತದೆ.

ಹವಾಮಾನ ಆಧಾರಿತ ಬೆಳೆ ವಿಮೆಗೆ ಜೂನ್-30ರ ಗಡುವು ವಿಧಿಸಿದರೂ ಅರ್ಜಿ ಇನ್ನೂ ಆಹ್ವಾನಿಸಿಲ್ಲ. ಇದರಿಂದಾಗಿ ಹವಾಮಾನ ಆಧಾರಿತ ಬೆಳೆ ವಿಮೆ ಜಾರಿ ಬಗ್ಗೆ ಬೆಳೆಗಾರರು ಆಂತಕಕ್ಕೆ ಒಳಗಾಗಿದ್ದಾರೆ. ವಾಣಿಜ್ಯ ಬೆಳೆಗಳಿಗೆ ಈ ಬೆಳೆ ವಿಮೆಯನ್ನು ನೀಡುತ್ತಿದ್ದು, ಜೂನ್ ಅಂತ್ಯದ ಗಡುವು ದಾಟಿದರೂ ಅರ್ಜಿ ಆಹ್ವಾನಿಸದಿರುವುದು ವಿಪರ್ಯಾಸವಾಗಿದೆ. ಮುಖ್ಯ ವಿಚಾರವೆಂದರೆ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಲ್ಲಿ ವಿಮಾ ಕಂಪನಿಗಳಿಗೆ ಲಾಭ ಇಲ್ಲ ಎಂದು ಕಂಪನಿಗಳೇ ಹಿಂದೇಟು ಹಾಕುತ್ತಿವೆ.

ಕೊನೆಯ ಕ್ಷಣದಲ್ಲಿ ಕಡಿಮೆ ಅವಧಿಗೆ ಅರ್ಜಿ ಆಹ್ವಾನಿಸಿದರೆ ಬೆಳೆಗಾರರು ವಿಮೆ ಪಾವತಿಸಲು ಸಾಧ್ಯವಾಗುವುದಿಲ್ಲ ಹಾಗೂ ವಿಮೆ ಮೊತ್ತವು ಹೆಚ್ಚಾಗುವುದಿಲ್ಲ. ಇದರಿಂದ ಬೆಳೆಗಾರರಿಗೆ ಪರಿಹಾರವು ಕೈಗೆಟುಕುವುದಿಲ್ಲ ಎಂಬತಾಗುತ್ತದೆ. ಆದಕಾರಣ ಸರ್ಕಾರ ಹವಾಮಾನ ಆಧಾರಿತ ಬೆಲೆ ವಿಮೆಯ ಗಡುವನ್ನು ಜುಲೈ ಅಂತ್ಯದವರೆಗೆ ವಿಸ್ತರಿಸಿ ಕೂಡಲೇ ಅರ್ಜಿಗಳನ್ನು ಆಹ್ವಾನಿಸಿ ಬೆಳೆಗಾರರಿಗೆ ಅನುಕೂಲ ಮಾಡಿಕೊಡಬೇಕೆಂಬುದುರ ಕುರಿತು.

ಉತ್ತರ : ಕರ್ನಾಟಕ ರಾಜ್ಯದಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (RWBCIS) ಯನ್ನು 2016 ಮುಂಗಾರು ಹಂಗಾಮಿನಿಂದ ಜಾರಿಗೊಳಿಸಲಾಗುತ್ತಿದೆ. ಯೋಜನೆಯ ಅನುಷ್ಠಾನಕ್ಕಾಗಿ 3 (ಮೂರು) ವರ್ಷಗಳ ಅವಧಿಗೆ ಆಹ್ವಾನಿಸಲಾದ ಟೆಂಡರ್ ಅವಧಿಯು 2022-23 ರಲ್ಲಿ ಕೊನೆಗೊಂಡಿದ್ದು, 2023-24 ಸಾಲಿನಲ್ಲಿ ಯೋಜನೆಯನ್ನು ಅನುಷ್ಠಾನ ಮಾಡಲು ದಿನಾಂಕ:13.03.2023ರಂದು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಭಾರತ ಸರ್ಕಾರ ವಿಧಿಸಿರುವ ಪ್ರೀಮಿಯಂ ಮಿತಿಗಿಂತಲೂ ಹೆಚ್ಚಿನ ದರವನ್ನು ವಿಮಾ ಸಂಸ್ಥೆಗಳು ನಮೂದಿಸಿದ್ದರಿಂದ, ಹೆಚ್ಚಿನ ಪ್ರೀಮಿಯಂ ಹೊರೆಯನ್ನು ರೈತರಿಗೆ ವರ್ಗಾಯಿಸುವುದನ್ನು ತಪ್ಪಿಸಲು ರೈತರ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ಹೆಚ್ಚಿನ ಸಂಖ್ಯೆಯಲ್ಲಿ ಬಿಡ್ದುದಾರರನ್ನು ಆಹ್ವಾನಿಸಿ, ಸ್ಪರ್ಧಾತ್ಮಕ ಪ್ರೀಮಿಯಂ ದರಗಳನ್ನು ಪಡೆಯುವ ಉದ್ದೇಶದಿಂದ ಕ್ಲಸ್ಟರ್ ಗಾತ್ರವನ್ನು ಕಡಿಮೆ ಮಾಡಿ ಒಂದು ಜಿಲ್ಲೆಗೆ ಒಂದು ಕ್ಲಸ್ಟರ್‌ನಂತೆ ಜಿಲ್ಲಾವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ.

ಪ್ರಸ್ತುತ 6 (ಆರು) ಜಿಲ್ಲೆಗಳಾದ ದಾವಣಗೆರೆ, ಕೋಲಾರ, ಹಾಸನ, ಉಡುಪಿ, ತುಮಕೂರು ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಟೆಂಡರ್‌ಗಳನ್ನು ಅಂತಿಮಗೊಳಿಸಿ, ರಾಜ್ಯ ಹಣಕಾಸು ಇಲಾಖೆಯ ಅನುಮೋದನೆಯನ್ನು ಪಡೆಯಲಾಗಿದೆ. ಈ ಜಿಲ್ಲೆಗಳಲ್ಲಿ ಮುಂಗಾರು ಹಂಗಾಮಿನ ಎಲ್ಲಾ ಅನುಮೋದಿತ ಬೆಳೆಗಳಿಗೆ ನೊಂದಣಿ ಅಂತಿಮ ದಿನಾಂಕವನ್ನು 15 ಜುಲೈ 2023 ಕ್ಕೆ ವಿಸ್ತರಿಸಲು ವಿಮಾ ಸಂಸ್ಥೆಗಳ ಸಹಮತಿ ಪಡೆಯಲಾಗಿದೆ. ಈ ಬಗ್ಗೆ ದಿನಾಂಕ:06.07.2023 ರಂದು ಕೇಂದ್ರ ಸರ್ಕಾರವು ಅನುಮತಿ ನೀಡಿರುತ್ತದೆ. ಸದರಿ ಆರು ಜಿಲ್ಲೆಗಳಲ್ಲಿ ಅಡಿಕೆ, ಕರಿಮೆಣಸು, ವಿಳ್ಯದೆಲೆ, ದ್ರಾಕ್ಷಿ, ದಾಳಿಂಬೆ, ಪರಂಗಿ ಮತ್ತು ನಿಂಬೆ ಬೆಳೆಗಳಿಗೆ ರೈತರ ನೊಂದಣಿಗೆ ಅಂತಿಮ ದಿನಾಂಕವನ್ನು15 ಜುಲೈ 2023ಕ್ಕೆ ವಿಸ್ತರಿಸಲಾಗಿದೆ. ಮಾವು ಬೆಳೆಗೆ 31 ಜುಲೈ 2023 ಕೊನೆ ದಿನಾಂಕ ಆಗಿರುತ್ತದೆ. ಈ ಕುರಿತು ಅಧಿಸೂಚನೆ ಹೊರಡಿಸಲಾಗಿದೆ.

ಉಳಿದ 25 ಜಿಲ್ಲೆಗಳಿಗೆ ಮರು ಟೆಂಡರ್ ಅನ್ನು ಈಗಾಗಲೇ ಕರೆಯಲಾಗಿದ್ದು, ಮುಂಗಾರು ಹಂಗಾಮಿನ ಹಸಿರು ಮೆಣಸಿನಕಾಯಿ, ಹೂಕೋಸು, ಅಡಿಕೆ, ಕರಿಮೆಣಸು, ವಿಳ್ಯದೆಲೆ, ದ್ರಾಕ್ಷಿ, ದಾಳಿಂಬೆ, ಪರಂಗಿ, ಶುಂಠಿ ಮತ್ತು ಮಾವು ಬೆಳೆಗಳಿಗೆ ನೊಂದಣಿ ಅಂತಿಮ ದಿನಾಂಕವನ್ನು 31 ಜುಲೈ 2023 ಆಗಿ ನಿಗದಿಪಡಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಯೋಜನೆ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.

HORTI 236 HGM 2023

**(ಎಸ್.ಎಸ್.ಮಲ್ಲಿಕಾರ್ಜುನ್)**
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು